# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

## ಸಿ.ಸಿ. ನಂ. 361/16

ಚಾ.ಸಾ. 80

ಪ್ರಾ.ಸಾ. 46

| | | |
|---|---|---|
| ಸಾಕ್ಷಿದಾರರ ಹೆಸರು | – | ಸುಶೀಲಾ ಕಲಕೇರಿ |
| ಗಂಡನ ಹೆಸರು | – | ಬೊಮ್ಮಣ್ಣ ಕಲಕೇರಿ |
| ವಯಸ್ಸು | – | 78 ವರ್ಷ |
| ಉದ್ಯೋಗ | – | ನಿವೃತ್ತ ಅಧಿಕಾರಿ |
| ವಾಸ್ತವ್ಯ | – | ಧಾರವಾಡ |

(ಇಂದು ದಿನಾಂಕಃ 24-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

ನಾನು ದಿನಾಂಕ 11-09-2001 ರಿಂದ 30-12-2006 ರ ವರೆಗೆ ಶಿಕ್ಷಕಿಯರ ಸರಕಾರಿ ತರಭೇತಿ ಕೇಂದ್ರ, ಧಾರವಾಡದಲ್ಲಿ ಅಧೀಕ್ಷಕಿಯಾಗಿ ಕರ್ತವ್ಯನಿರ್ವಹಿಸಿದ್ದೇನೆ. 2001 ನೇ ಸಾಲಿನಲ್ಲಿ ಕುಮಾರಿ ಫೌಜಿಯಾ ಮತ್ತು ಬೀಬಿ ಬತೂಲ್ ಎನ್ನುವ ವಿದ್ಯಾರ್ಥಿನಿಯರು 2 ಎ ಗ್ರೂಪ್‌ನಡಿಯಲ್ಲಿ ಟಿ.ಸಿ.ಹೆಚ್. ಕೋರ್ಸಗೆ ಸಿ.ಇ.ಟಿ. ಸೆಲ್ ಬೆಂಗಳೂರಿನಿಂದ ಆಯ್ಕೆಯಾಗಿ ದಾಖಲಾಗಿ ನಮ್ಮ ತರಭೇತಿ ಸಂಸ್ಥೆಗೆ ಮೊದಲ ವರ್ಷದ ಟಿ.ಸಿ.ಹೆಚ್. ಕೋರ್ಸಗೆ ವರದಿ ಮಾಡಿಕೊಂಡಿದ್ದರು. ಕೆಲ ದಿನಗಳು ಆದ ನಂತರ ಸದರಿ ವಿದ್ಯಾರ್ಥಿನಿಯರು ಸುಳ್ಳು ಜಾತಿ ಪ್ರಮಾಣಪತ್ರ ಕೊಟ್ಟು ಆಯ್ಕೆಯಾಗಿರುತ್ತಾರೆ ಎಂದು ಮತ್ತು ಅವರ ಆಯ್ಕೆ ರದ್ದತಿಯಾದ ಬಗ್ಗೆ ನಮಗೆ ಸಿ.ಇ.ಟಿ. ಸೆಲ್‌ನಿಂದ ಮಾಹಿತಿ ಬಂದಿದೆ. ಅವರ ಆಯ್ಕೆಯನ್ನು ರದ್ದುಪಡಿಸಿರುವುದಾಗಿ ನಮಗೆ ಮಾಹಿತಿ ಬಂದಿದೆ. ನಂತರ ಆರೋಪಿತರು ಸದರಿ ವಿದ್ಯಾರ್ಥಿನಿಯರಿಂದ ಹಣ ಪಡೆದು ಸುಳ್ಳು ದಾಖಲಾತಿಗಳನ್ನು ಸೃಷ್ಠಿ ಮಾಡಿ ಆಯ್ಕೆ ಪ್ರಾಧಿಕಾರಕ್ಕೆ ಸಲ್ಲಿಸಿ ಟಿ.ಸಿ.ಹೆಚ್ ಸೀಟ್‌ನ್ನು ಕೊಡಿಸಿರುವುದಾಗಿ ತಿಳಿದು ಬಂದಿದೆ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ ಆರೋಪಿ ನಂ.1 ರಿಂದ 5 ಮತ್ತು 9 ರವರ ಪರ ಶ್ರೀ ಡಿ.ವಿ.ಜಿ. ವಕೀಲರಿಂದಃ**

ಸದರಿ ವಿದ್ಯಾರ್ಥಿನಿಯರು ಆಯ್ಕೆಯಾಗಿ ನಮ್ಮ ತರಭೇತಿ ಕೇಂದ್ರಕ್ಕೆ ದಾಖಲಾತಿಗೆ ಬಂದು ಪ್ರವೇಶವನ್ನು ಪಡೆದು ನಂತರ ಅವರ ಆಯ್ಕೆ ರದ್ದತಿ ಆಗಿರುವುದರ ಬಗ್ಗೆ ಮಾತ್ರ ಗೊತ್ತಿದೆ. ಸದರಿ ದಾಖಲಾತಿಗಳನ್ನು ಯಾರು ಸೃಷ್ಠಿ ಮಾಡಿದ್ದಾರೆ ಮತ್ತು ಯಾರಿಗೆ ಕೊಟ್ಟಿದ್ದಾರೆ ಎನ್ನುವ ಮಾಹಿತಿ ನನಗೆ ಇಲ್ಲ ಎಂದರೆ ಸರಿ. ಪೊಲೀಸರು ಹೇಳಿ ಕೊಟ್ಟ ಹಾಗೆ ನಾನು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿ.

**ಪಾಟೀ ಸವಾಲುಃ** ಆರೋಪಿ ನಂ. 7 ರವರ ಪರ ವಕೀಲರು ಹಾಜರಿದ್ದು, ಆರೋಪಿ ನಂ.1 ರಿಂದ 5 ಮತ್ತು 9 ರವರ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ